O.S.255/17
ಪಿ ಡಬ್ಲ್ಯೂ-1

**ಸಾಕ್ಷಿಯನ್ನು ದಿನಾಂಕ 23-02-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ- 2,3, 6 ನೇ ಪ್ರತಿವಾದಿ ಪರ ಶ್ರೀ ಬಿ ಎ ಪಿ ವಕೀಲರಿಂದಃ**

**1.** **1** ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. ನಾನು ಮತ್ತು **1** ನೇ ಪ್ರತಿವಾದಿ ಜೊತೆಯಲ್ಲೇ ವಾಸ ಮಾಡುತ್ತಿರುತ್ತೇವೆಂದರೆ ಸರಿಯಲ್ಲ. ನಾನು **7** ತಿಂಗಳಿನ ಮಗುವಾಗಿದ್ದಾಗ **1** ನೇ ಪ್ರತಿವಾದಿ ನಮ್ಮನ್ನು ಬಿಟ್ಟು ಹೋಗಿರುತ್ತಾರೆ. ಪ್ರತಿವಾದಿಗಳ ಕುಟುಂಬದವರ ಬಗ್ಗೆ ನನಗೆ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಚಿಕ್ಕತಿಮ್ಮಯ್ಯರವರು ಯಾವ ಸಾಲಿನಲ್ಲಿ ಮೃತಪಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಅಂಶಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ನಾನು ನನ್ನ ಅಜ್ಜಿ ಮತ್ತು ತಾತನ ಅಂತಿಮ ಕಾರ್ಯಕ್ಕೆ ಹೋಗಿರುತ್ತೇನೆ. ಪುಟ್ಟಮ್ಮಜ್ಜಿ ಈಗ ಜೀವಂತ ಇರುವುದಿಲ್ಲ, ಅವರು ಯಾವಾಗ ಮೃತಪಟ್ಟಿರುತ್ತಾರೆಂದು ನೆನಪಿಲ್ಲ. ದಿಃ **05.04.2008** ರಲ್ಲಿ ಚಿಕ್ಕತಿಮ್ಮಯ್ಯ ರವರು, ದಿಃ **17.09.2019** ರಂದು ಪುಟ್ಟಮ್ಮಜ್ಜಿ ಮೃತಪಟ್ಟಿರುತ್ತಾರೆಂದರೆ ಸರಿ. ಸದರಿಯವರ ಅಂತಿಮ ಕಾರ್ಯಗಳಿಗೆ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಚಿಕ್ಕತಿಮ್ಮಯ್ಯ ಮೃತಪಟ್ಟ ನಂತರ **2** ನೇ ಪ್ರತಿವಾದಿ ನನ್ನ ಅತ್ತೆ ಸಿದ್ದಗಂಗಮ್ಮರವರ ಮನೆಯಲ್ಲಿ ವಾಸ ಮಾಡುತ್ತಿದ್ದರು. ಸದರಿ ಸಿದ್ದಗಂಗಮ್ಮರವರ ಗಂಡನ ಹೆಸರು ದಾಸಪ್ಪ. **6** ನೇ ಪ್ರತಿವಾದಿ ಸಿದ್ದಗಂಗಮ್ಮನ ಮಗ ಅಲ್ಲ, **3** ನೇ ಪ್ರತಿವಾದಿಯ ಮಗ ಎಂದರೆ ನನಗೆ ಅವರ ಹೆಸರುಗಳು ಅಷ್ಟಾಗಿ ಗೊತ್ತಿರುವುದಿಲ್ಲ.

**2.** ದಾವಾ ಆಸ್ತಿ ಮಾತ್ರ ಚಿಕ್ಕತಿಮ್ಮಯ್ಯರವರ ಕುಟುಂಬಕ್ಕೆ ಇದ್ದ ಬಗ್ಗೆ ನನಗೆ ಗೊತ್ತು, ಬೇರೆ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಇನ್ನೂ ಇಬ್ಬರು ಹೆಂಡತಿಯರು ಇದ್ದು, ಸದರಿಯವರಿಗೆ ತಲಾ ಒಬ್ಬ ಹೆಣ್ಣು ಮಗಳು ಇರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಇದೇ ನ್ಯಾಯಾಲಯದಲ್ಲಿ ವಿಭಾಗಕ್ಕಾಗಿ **OS 144/18** ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ತಿಮ್ಮನಾಯಕನಹಳ್ಳಿ ಗ್ರಾಮದ ಸ.ನ. **44/1** ಜಿರಲ್ಲಿ ನನ್ನ ತಾತನಿಗೆ **1**

ಗುಂಟೆ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತನಿಗೆ ಸೇರಿದ ಮನೆ ತಿಮ್ಮನಾಯಕನಹಳ್ಳಿಯಲ್ಲಿ ಇದ್ದು ಅವರ ಜೀವಿತಾವಧಿಯಲ್ಲಿ ಅವರು ಸದರಿ ಮನೆಯನ್ನು ಮಾರಾಟ ಮಾಡಿರುತ್ತಾರೆ. ಆ ರೀತಿ ಮಾರಾಟ ಮಾಡಿದ ನಂತರ ನನ್ನ ತಾತನ ಕುಟುಂಬದವರು 3 ನೇ ಪ್ರತಿವಾದಿಯವರ ಮನೆಯಲ್ಲಿ ವಾಸ ಮಾಡುತ್ತಿದ್ದರು. 1 ನೇ ಪ್ರತಿವಾದಿ ನನ್ನ ತಾಯಿಯನ್ನು ಮದುವೆ ಮಾಡಿಕೊಂಡ ನಂತರ ನನ್ನ ಅಜ್ಜಿ ತಾತನ ಜೊತೆ ನನ್ನ ತಂದೆ ತಾಯಿ ವಾಸ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮದ್ಯಪಾನ ಮಾಡಿ ಬಂದು ಅಜ್ಜಿ ತಾತನಿಗೆ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ಅಜ್ಜಿ ತಾತ ತಿಮ್ಮನಾಯಕನಹಳ್ಳಿಯನ್ನು ಬಿಟ್ಟು ಹೋಗಿ 3 ನೇ ಪ್ರತಿವಾದಿ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾತನ ಆಸ್ಪತ್ರೆ ಖರ್ಚುಗಳಿಗಾಗಿ ನನ್ನ ಅಜ್ಜಿ ಸಾಲ ಮಾಡಿದ್ದು, ಸದರಿ ಸಾಲದ ಹಣವನ್ನು ತೀರುವಳಿ ಮಾಡುವ ಸಲುವಾಗಿ ನನ್ನ ಅಜ್ಜಿ ದಾವಾ ಆಸ್ತಿಯನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಕ್ರಯದ ಹಣವನ್ನು ನನ್ನ ಅಜ್ಜಿ ಸಾಲ ತೀರಿಸಲು ಬಳಕೆ ಮಾಡಿ ಉಳಿದ ಹಣವನ್ನು ಅವರ ಜೀವನಕ್ಕಾಗಿ ಬಳಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆಗೆ ಇನ್ನು ಇಬ್ಬರು ಹೆಂಡತಿಯರು ಇರುವ ಬಗ್ಗೆ ಹಾಗೂ ಅವರಿಗೆ ಇಬ್ಬರು ಮಕ್ಕಳು ಇರುವ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.255/17
ಪಿ ಡಬ್ಲ್ಯೂ-1

O.S.255/17
ಪಿಡಬ್ಲ್ಯೂ-1

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
*Koratagere.*